ಈ ಲೇಖನದ ವಿಷಯಾನುಕ್ರಮಣಿಕೆ


ಸಾರಾಮೃತಯುಕ್ತವಾದ ಶ್ರೀ ಹರಿಭಕ್ತಿಸಾರ 2

ಎಂಟನೆಯ ಪದ್ಯ 2

ಅಕ್ಷಯ 2

ಆಶ್ರಿತಸುಜನಜನಸಂರಕ್ಷಣ 3

ಶ್ರೀವತ್ಸ 3

ಕೌಸ್ತುಭ 3

ಮೋಕ್ಷದಾಯಕ 4

ಕುಟಿಲದಾನವಶಿಕ್ಷ 4

ಕುಮುದಾಕ್ಷ 5

ಪಕ್ಷಿವಾಹನ 6

ದೇವಸಂಕುಲಪಕ್ಷ 6

ನಿಗಮಾಧ್ಯಕ್ಷ 7

ವರನಿಟಿಲಾಕ್ಷಸಖ 7

ಸರ್ವೇಶ 8

# ವಿಶ್ವನಂದಿನಿ ಲೇಖನಮಾಲೆ – 33

## ಸಾರಾಮೃತಯುಕ್ತವಾದ ಶ್ರೀ ಹರಿಭಕ್ತಿಸಾರ
## ಎಂಟನೆಯ ಪದ್ಯ

**ಅಕ್ಷಯಾಶ್ರಿತಸುಜನಜನಸಂ-**
**ರಕ್ಷಣ ಶ್ರೀವತ್ಸ ಕೌಸ್ತುಭ**
**ಮೋಕ್ಷದಾಯಕ ಕುಟಿಲದಾನವಶಿಕ್ಷ ಕುಮುದಾಕ್ಷ ।**
**ಪಕ್ಷಿವಾಹನ ದೇವಸಂಕುಲ-**
**ಪಕ್ಷ ನಿಗಮಾಧ್ಯಕ್ಷ ವರನಿಟಿ-**
**ಲಾಕ್ಷಸಖ ಸರ್ವೇಶ ರಕ್ಷಿಸು ನಮ್ಮನನವರತ ॥ ೮ ॥**

## ಅಕ್ಷಯ

ಎಂದಿಗೂ ಯಾವುದರ ಹಾನಿಯಿಲ್ಲದವನು, ಯಾವುದನ್ನೂ ಕಳೆದುಕೊಳ್ಳದವನು. ಪರಮಾತ್ಮ ಪರಿಪೂರ್ಣನಾದ್ದರಾದ್ದರಿಂದ ಅವನು ಯಾವುದನ್ನೂ ಹೊಸದಾಗಿ ಪಡೆದುಕೊಳ್ಳಬೇಕಾಗಿಲ್ಲ , ಯಾವುದನ್ನು ಕಳೆದುಕೊಳ್ಳಬೇಕಾಗಿಲ್ಲ.
“**ಗ್ರಾಹ್ಯಾಪಹೇಯರಹಿತಃ**”

## ಆಶ್ರಿತಸುಜನಜನಸಂರಕ್ಷಣ

ತನ್ನನ್ನು ಆಶ್ರಯಿಸಿದ ಸುಜನರಾದ ಜನರನ್ನು ಸಂಪೂರ್ಣವಾಗಿ ರಕ್ಷಣೆ ಮಾಡುವವನು.

## ಶ್ರೀವತ್ಸ

ಪರಮಾತ್ಮ ತನ್ನ ನಲ್ಮೆಯ ಮಡದಿಗೆ ತನ್ನ ದೇಹದಲ್ಲಿನ ಎದೆಯ ಭಾಗದಲ್ಲಿ ಶಾಶ್ವತವಾದ ಸ್ಥಾನವನ್ನು ನೀಡಿದ್ದಾನೆ. ಲಕ್ಷ್ಮೀದೇವಿ ಪರಮಾತ್ಮನ ವಕ್ಷಃಸ್ಥಳದಲ್ಲಿ ಆಶ್ರಿತಳಾಗಿರುವ ಸ್ಥಾನಕ್ಕೆ ಶ್ರೀವತ್ಸ ಎಂದೇ ಹೆಸರು. ಅನಂತಗುಣಪೂರ್ಣತ್ವ ಎನ್ನುವದು ಹೇಗೆ ಭಗವಂತನ ಶಾಶ್ವತವಾದ ಲಕ್ಷಣವೋ ಹಾಗೆಯೇ ಶ್ರೀವತ್ಸ ಎನ್ನುವದೂ ಪರಮಾತ್ಮನ ಶಾಶ್ವತವಾದ ಲಕ್ಷಣ.

## ಕೌಸ್ತುಭ

ಕೌಸ್ತುಭ ಎನ್ನುವದು ಒಂದು ಮಣಿಯ ಹೆಸರು. ಸಾಕ್ಷಾತ್ ಬ್ರಹ್ಮದೇವರೇ ಈ ಮಣಿಯ ರೂಪವನ್ನು ಪಡೆದು ಅಮೃತಮಥನಕಾಲದಲ್ಲಿ

ಪ್ರಾದುರ್ಭೂತರಾಗುತ್ತಾರೆ. ಆ ರೀತಿಯ ಮತ್ತೊಂದು ಮಣಿ ಬ್ರಹ್ಮಾಂಡದಲ್ಲಿಲ್ಲ. ಮಣಿಯ ರೂಪದಲ್ಲಿ ಪ್ರಾದುರ್ಭವಿಸಿದ ಬ್ರಹ್ಮದೇವರು ಅದನ್ನು ಭಗವಂತ ಧರಿಸಬೇಕು ಎಂದು ಭಗವಂಮತನನ್ನು ಯಾಚಿಸಿದಾಗ ಅವರ ಮೇಲಿನ ಭೂರಿ ಅನುಗ್ರಹದಿಂದ ಪರಮಾತ್ಮ ಅದನ್ನು ತನ್ನ ಕಂಠದಲ್ಲಿ ಧರಿಸುತ್ತಾನೆ.

## ಮೋಕ್ಷದಾಯಕ

ಇದೂ ಕೇವಲ ಪರಮಾತ್ಮನ ಲಕ್ಷಣ. ಚೇತನಪ್ರಪಂಚದ ಉಳಿದ ಯಾರಿಗೂ ಮೋಕ್ಷಪ್ರದತ್ವ ಎನ್ನುವ ಗುಣವಿಲ್ಲ. ವಿವರಗಳನ್ನು ಹಿಂದೆಯೇ ಮುಕುಂದ ಎಂಬ ಪದದ ಅರ್ಥಾನುಸಂಧಾನವನ್ನು ಮಾಡುವಾಗ ತಿಳಿದಿದ್ದೇವೆ.

## ಕುಟಿಲದಾನವಶಿಕ್ಷ

ಕುಟಿಲ ಎಂದರೆ ವಕ್ರವಾದದ್ದು. ಆಲೋಚನೆಯಲ್ಲಿ , ವರ್ತನೆಯಲ್ಲಿ, ಸುಖವನ್ನು ಪಡೆಯುವ ಕ್ರಮವನ್ನು ಆರಿಸಿಕೊಳ್ಳುವದರಲ್ಲಿ, ಸುಖವನ್ನು

ಅನಭವಿಸುವಲ್ಲಿ ಕಡೆಗೆ ಸ್ವಭಾವದಲ್ಲಿಯೇ ವಕ್ರರಾದವರು ದಾನವರು. ಯಾರ ತಲೆಯ ಮೇಲೆ ಕೈಯಿಡುತ್ತೇನೆಯೋ ಅವರು ಸಾಯುವಂತಾಗಲಿ ಎಂಬ ವರವನ್ನು ಪಡೆದು ಅದನ್ನು ನೀಡಿದ ಶಿವನ ತಲೆಯ ಮೇಲೆ ಕೈಯಿಡ ಹೊರಟವರು. ಯಜ್ಞಗಳನ್ನು ವಿನಾಶಪಡಿಸಿದರೆ ಯಜ್ಞಮೂಲನಾದ ನಾರಾಯಣ ವಿನಾಶವಾಗುತ್ತಾನೆ ಎಂದು ವಕ್ರವಾಗಿ ಆಲೋಚಿಸಿ ಯಜ್ಞಗಳ ವಿಧ್ವಂಸನ ಮಾಡುವವರು. ಇಬ್ಬರೂ ಸೇರಿ ಕುಡಿಯಬೇಕು ಎಂಬ ಕರಾರನ್ನು ಕಡೆಯ ಘಳಿಗೆಗೆ ಮುರಿದು ಅಮೃತದ ಬಟ್ಟಲನ್ನು ಕಿತ್ತುಗೊಂಡು ಕದ್ದೊಯ್ದುವರು. ಇಂಥ ಕುಟಿಲ ದಾನವರನ್ನು ಶಿಕ್ಷಿಸುವವನು ಶ್ರೀಹರಿ. ಆದ್ದರಿಂದ ಕುಟಿಲದಾನವಶಿಕ್ಷ.

## ಕುಮುದಾಕ್ಷ

ಕುಮುದ ಎನ್ನುವದು ಕಮಲಪುಷ್ಪದ ರೀತಿಯಲ್ಲಿಯೇ ಇರುವ ಒಂದು ಪುಷ್ಪಪ್ರಭೇದ. ರೂಪದಲ್ಲಿ ಬಹಳ ವ್ಯತ್ಯಾಸವಿರದಿದ್ದರೂ ಬಣ್ಣದಲ್ಲಿ ವ್ಯತ್ಯಾಸವಿರುತ್ತದೆ. ಕಮಲ ಸೂರ್ಯ ಉದಿಸಿದಾಗ

ಅರಳಿ ಅಸ್ತಮಿಸಿದಾಗ ಮುದುಡಿದರೆ, ಕುಮುದ ಚಂದ್ರ ಉದಯಿಸಿದಾಗ ಅರಳಿ ಸೂರ್ಯ ಉದಯಿಸಿದಾಗ ಅಸ್ತಮಿಸುತ್ತದೆ. ಆ ಕುಮುದದಂತೆ ಕಣ್ಣುಳ್ಳವನು. ಪುಂಡರೀಕಾಕ್ಷ ಎಂದೇ ಅರ್ಥ.

## ಪಕ್ಷಿವಾಹನ

ಪಕ್ಷ ಎಂದರೆ ರೆಕ್ಕೆ. ಪಕ್ಷ ಉಳ್ಳದ್ದು ಪಕ್ಷಿ, ಹಕ್ಕಿ. ಪಕ್ಷಿರಾಜನಾದ ಗರುಡನನ್ನು ವಾಹನವನ್ನಾಗಿ ಉಳ್ಳವನು.

## ದೇವಸಂಕುಲಪಕ್ಷ

ಸಂಕುಲ ಎಂದರೆ ಗುಂಪು. ಜಗತ್ತಿನಲ್ಲಿ ಎರಡು ಗುಂಪುಗಳು. ಒಂದು ದೇವಸಂಕುಲ. ಮತ್ತೊಂದು ದೈತ್ಯಸಂಕುಲ. ಜೀವಪ್ರಪಂಚಕ್ಕೆ ಹಿತವನ್ನು ಬಯಸುವ ಸಜ್ಜನರಾದ ದೇವತೆಗಳ ಗುಂಪಿಗೆ ಸೇರಿದವನು ದೇವಸಂಕುಲಪಕ್ಷ. ಸಜ್ಜನರನ್ನು ಪೊರೆವವನು ಎಂದರ್ಥ. ಇಲ್ಲಿ ಪಕ್ಷ ಎಂದರೆ ಬದಿ ಎಂದರ್ಥ. ದೇವಸಂಕುಲದ ಬದಿಯವನು, ಆ ಪಕ್ಷಕ್ಕೆ ಸೇರಿದವನು.

## ನಿಗಮಾಧ್ಯಕ್ಷ

ನಿಗಮ ಎಂದರೆ ವೇದಗಳು ಎಂಬ ಅರ್ಥವನು ಹಿಂದೆಯೇ ತಿಳಿದಿದ್ದೇವೆ. ಅಧ್ಯಕ್ಷ ಎಂದರೆ ಅಕೃತನಾದವನು. ಸಮಸ್ತವೇದಗಳಿಂದ ಪ್ರತಿಪಾದ್ಯನಾಗುವ ಅಧಿಕಾರ ಪರಮಾತ್ಮನಿಗೆ ಮಾತ್ರ ಇದೆ, ಕಾರಣ ಅವನಲ್ಲಿ ಸಮಸ್ತವೇದಪ್ರತಿಪಾದ್ಯವಾದ ಅನಂತಗುಣಗಳೂ ಇವೆ. ಶಿವ ಸ್ಕಂದ ಮುಂತಾದವರು ವೇದಪ್ರತಿಪಾದ್ಯರಾದರೂ ಪರಬ್ರಹ್ಮ ಎಂಬುದಾಗಿ ಪ್ರತಿಪಾದ್ಯರಲ್ಲ. ಆದ್ದರಿಂದ ಭಗವಂತನೊಬ್ಬನೇ ನಿಗಮಾಧ್ಯಕ್ಷ. ಅನಂತ ವೇದಗಳಿಂದ ಅಧಿಕೃತವಾಗಿ ಪ್ರತಿಪಾದ್ಯನಾದವನು. ಜಗದಧ್ಯಕ್ಷ ಎಂಬ ಪಾಠದಲ್ಲಿ ಇಡಿಯ ಜಗತ್ತನ್ನು ತನ್ನ ಕಣ್ಣೋಟದಿಂದ ಕಾಪಿಡುತ್ತಿರುವವನು ಎಂದರ್ಥ.

## ವರನಿಟಿಲಾಕ್ಷಸಖ

ನಿಟಿಲ ಎಂದರೆ ಹಣೆ. ಹಣೆಯಲ್ಲಿ ಕಣ್ಣುಳ್ಳ ಶಿವ ನಿಟಿಲಾಕ್ಷ. ದೇವಶ್ರೇಷ್ಠನಾದ ರುದ್ರದೇವರೆ ಸಖನಾದವನು. ಅವರ ಆಪ್ತಸಖನಾಗಿ ಅವರ

ಅಂತರ್ಯಾಮಿಯಾಗಿ ಅವರನ್ನು ರಕ್ಷಿಸುತ್ತಿರುವವನು.

## ಸರ್ವೇಶ

ಜಗತ್ತಿನಲ್ಲಿ ಈಶ್ವರರು ಬಹಳ ಜನ ಇದ್ದಾರೆ. ಒಂದು ನಿರ್ದಿಷ್ಟ ಗಣಕ್ಕೆ ನಾಥನಾದ ವಿಘ್ನೇಶ್ವರ ಗಣೇಶ. ಯಕ್ಷಗಂಧರ್ವರಿಗೆ ಒಡೆಯನಾದ ಕುಬೇರ ಯಕ್ಷೇಶ. ತನಗಿಂತ ಕಿರಿಯರಾದ ದೇವತೆಗಳಿಗೆ ಒಡೆಯನಾದ ಇಂದ್ರ ದೇವೇಶ. ಈ ಈಶರಿಗಿಂತಲೂ ವರ ಶ್ರೇಷ್ಠ ಎಂಬ ಕಾರಣಕ್ಕೆ ಭೂತೇಶನಾದ ಶಿವ ಮಹೇಶ. ಪಕ್ಷಿಗಳಿಗೆ ಒಡೆಯ ಎನ್ನುವ ಕಾರಣಕ್ಕೆ ಗರುಡ ಪಕ್ಷೀಶ. ಹಾಗೆಯೇ ಶೇಷ ನಾಗೇಶ. ಇವರೆಲ್ಲರೂ ತಮಗಿಂತಲೂ ಅಧಮರಾದವರನ್ನು ನಿಯಮಿಸುತ್ತಾ ಈಶರು ಎಂದು ಕರೆಸಿಕೊಂಡರೂ ತಮಗಿಂತ ಉತ್ತಮರಿಗೆ ಅಧೀನರಾದವರು.

ಆದರೆ ಯಾರಿಗೂ ಅಧೀನನಾಗದೇ ಸ್ವತಂತ್ರನಾಗಿ ಸರ್ವರನ್ನೂ ತನ್ನ ಅಧೀನದಲ್ಲಿಟ್ಟುಕೊಂಡ ಶ್ರೀಹರಿ ಸರ್ವೇಶ. ಅವನನ್ನು ನಿಯಮಿಸುವ ಚೇತನವೇ

ಜಗತ್ತಿನಲ್ಲಿಲ್ಲ. ಇಂಥ ಮಹಾಮಾಹಾತ್ಮ್ಯದ ಓ ನಾರಾಯಣ ಸರ್ವಕಾಲದಲ್ಲಿಯೂ ಬೆಂಬಿಡದೆ ನಮ್ಮನ್ನು ರಕ್ಷಿಸು ॥ ೮ ॥

# ವಿಶ್ವನಂದಿನಿಗೆ ಸಜ್ಜನರ ಸಹಾಯದ ಅಗತ್ಯವಿದೆ

ಪರಮಾತ್ಮನನ್ನು ತಿಳಿಸಿಕೊಡುವ ದಿವ್ಯಗ್ರಂಥಗಳನ್ನು ತಿಳಿಯಾದ ಭಾಷೆಯಲ್ಲಿ ಸಜ್ಜನರಿಗೆ ತಲುಪಿಸಲು ವಿಶ್ವನಂದಿನಿ 10000 ಗಂಟೆಗಳ ಉಪನ್ಯಾಸಗಳ ಗುರಿಯನ್ನೂ, 30000 ಪುಟಗಳ ಲೇಖನದ ಗುರಿಯನ್ನೂ ಹೊಂದಿದೆ.

ವಿಶ್ವನಂದಿನಿಯ ಎಲ್ಲ ಉಪನ್ಯಾಸಗಳೂ, ಲೇಖನಗಳೂ ಪ್ರತಿಯೊಬ್ಬರಿಗೂ ಉಚಿತವಾಗಿ ಲಭ್ಯ.

ಈ ಬೃಹತ್ ಜ್ಞಾನಸತ್ರ ನಿಮ್ಮ ನೆರವಿಲ್ಲದೇ ಮುಂದುವರೆಯಲು ಸಾಧ್ಯವಿಲ್ಲ.

ಈ ಜ್ಞಾನಕಾರ್ಯಕ್ಕೆ ನೆರವು ನೀಡುವ ಸಜ್ಜನರು ಕೆಳಗಿನ ಖಾತೆಗೆ ಹಣವನ್ನು ವರ್ಗಾಯಿಸಬಹುದು

- **Account Name** **VISHWANANDINI**
- **Account Number** **35368588017**
- **Account Type** **Current Account**
- **Bank** **State Bank of India**
- **Branch** **T. Narasipura, Mysore**
- **IFSC** **SBIN0013233**

Please WhatsApp the transaction details to
**9901551491**

ಈಗಾಗಲೇ ನೆರವು ನೀಡಿದ, ನೀಡುತ್ತಿರುವ ಸಜ್ಜನರಿಗೆ
ನನ್ನ  ಮನಃಪೂರ್ವಕ ಕೃತಜ್ಞತೆಗಳು.

**ನೀವು ವಿಶ್ವನಂದಿನಿಯ ಖಾತೆಗೆ ಹಣವನ್ನು**
**ವರ್ಗಾಯಿಸುವಾಗ**

**“ವಿಶ್ವನಂದಿನಿ ಗಮ್ಯ ತಲುಪಲಿ”**

**ಎಂದು ಗುರುದೇವತೆಗಳಗೆ,**
**ಶ್ರೀ ವೇದವ್ಯಾಸದೇವರಿಗೆ**
**ಪ್ರಾರ್ಥನೆ ಸಲ್ಲಿಸುವದನ್ನು ಮರೆಯಬೇಡಿ.**

ಸಜ್ಜನರ ಪ್ರಾರ್ಥನೆಯನ್ನು
ಶ್ರೀಹರಿ ಮನ್ನಿಸುತ್ತಾನೆ.

— ವಿಷ್ಣುದಾಸ ನಾಗೇಂದ್ರಾಚಾರ್ಯ


**Vishnudasa Nagendracharya**

No. 2, “Sri Madhwanuja Mandiram"
Kaveri Marga,  Hemmige Village,
Talakadu,  T Narasipura,
Mysore - 571122, Karnataka, India

nagendracharya@yahoo.co.in

WhatsApp:  9901 551 491